# ಕುವೆಂಪು ವಿಶ್ವವಿದ್ಯಾಲಯ

## ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ.

ಜ್ಞಾನಸಹ್ಯಾದ್ರಿ, ಶಂಕರಘಟ್ಟ-577451

ಫೋನ್ ನಂಬರ್: 08282-256166, ಇ-ಮೇಲ್: regexamku@gmail.com, ವೆಬ್‌ಸೈಟ್: www.kuvempu.ac.in


**Re-Accredited by NAAC with 'A' Grade, Ranked 73rd Place in NIRF– 2019 and Secured 45th Place in SCIMAGO Institutional Rankings**

ಸಂಖ್ಯೆ: ಕುವಿ/ಪವಿ/ಇಸಿಎಸ್-1/9936/2019-20 ದಿನಾಂಕ: 01-02-2020.

## ಸುತ್ತೋಲೆ

**ವಿಷಯ : "ಡಿಜಿ ಲಾಕರ್" ವಿಷಯದ ಬಗ್ಗೆ ಪ್ರಬಂಧ ಬರೆಯುವ ಕುರಿತು.**

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ. ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ **"ಡಿಜಿ ಲಾಕರ್"**ನ ಬಗ್ಗೆ ಸಂಪೂರ್ಣ ಮಾಹಿತಿ ಇರಬೇಕು ಎಂಬ ಉದ್ದೇಶದಿಂದ ವಿಶ್ವವಿದ್ಯಾಲಯ ಮಟ್ಟದಲ್ಲಿ ಈ ಕುರಿತು ಪ್ರತಿ ವಿದ್ಯಾರ್ಥಿಗಳಿಗೆ **"ಡಿಜಿ ಲಾಕರ್"** ವಿಷಯದ ಕುರಿತು ಪ್ರಬಂಧ ಸ್ಪರ್ದೆಯನ್ನು ಕಾಲೇಜು ವತಿಯಿಂದ ನಡೆಸಿ ಅತ್ಯುತ್ತಮವಾದ ಪ್ರಬಂಧವನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸಲು ಸೂಚಿಸಲಾಗಿದೆ. (ವಿವರಗಳನ್ನು ಪ್ರತ್ಯೇಕವಾಗಿ ಪತ್ರದೊಂದಿಗೆ ಲಗತ್ತಿಸಿದೆ.)

ಕಾಲೇಜು ಮಟ್ಟದಲ್ಲಿ ಆಯ್ಕೆಯಾದ ಪ್ರಬಂಧಗಳನ್ನು ಕ್ರೋಢೀಕರಿಸಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಅತ್ಯುತ್ತಮವಾದ 03 ಪ್ರಬಂಧಗಳನ್ನು ಆಯ್ಕೆ ಮಾಡಲಾಗುವುದು, ಹಾಗೂ ಈ 03 ಅತ್ಯುತ್ತಮವಾದ ಬರಹಗಳಿಗೆ ಪ್ರಮಾಣ ಪತ್ರ ನೀಡಲಾಗುವುದು.

**ಸದರಿ ವಿಷಯವನ್ನು ಕಡ್ಡಾಯವೆಂದು ಪರಿಗಣಿಸಲು ಸೂಚಿಸಲಾಗಿದೆ.**

ಕುಲಸಚಿವರು(ಪರೀಕ್ಷಾಂಗ)

ರಿಜಿಸ್ಟ್ರಾರ್ (ಮೌಲ್ಯ ಮಾಪನ)
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ, ಶಂಕರಘಟ್ಟ-577 451

ಗೆ,

1. ಅಧ್ಯಕ್ಷರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗ. ಜ್ಞಾನ ಸಹ್ಯಾದ್ರಿ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2. ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಯನ ಕೇಂದ್ರ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಕಡೂರು.
3. ಪ್ರಾಂಶುಪಾಲರು, ಎಲ್ಲಾ ಸ್ನಾತಕ ಕಾಲೇಜುಗಳು, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆ.
4. ಕಛೇರಿ ಪ್ರತಿ.

# ಕುವೆಂಪು ವಿಶ್ವವಿದ್ಯಾಲಯ

ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577451

ದೂರವಾಣಿ ಸಂಖ್ಯೆ: 08282–256166:ಇ–ಮೇಲ್:regexamku@gmail.com


**Re-Accredited by NAAC with 'A' Grade, Ranked 73rd Place in NIRF-2019 and Secured 45th Place in SCIMAGO Institutional Ranking**

ಸಂಖ್ಯೆ:ಕುವಿ:ಪವಿ: 9936 :2019–20: ದಿನಾಂಕ:01–02–2020

## ರಾಷ್ಟ್ರೀಯ ವಿಜ್ಞಾನ ದಿನಾಚರಣೆ – 2020

**ದಿನಾಂಕ:28–02–2020**

## ಪ್ರಬಂಧ ಸ್ಪರ್ಧೆ

**ಶೀರ್ಷಿಕೆ: – ಡಿಜಿಟಲ್ ಇಂಡಿಯಾದಲ್ಲಿ ವಿದ್ಯಾರ್ಥಿ ಸ್ನೇಹಿ– Digi Locker ವ್ಯವಸ್ಥೆ**

****

ಭಾರತ ಸರ್ಕಾರದ Ministry of Electronics and IT ವತಿಯಿಂದ Digital Inida ಕಾರ್ಯಕ್ರಮದಡಿಯಲ್ಲಿ ಎಲ್ಲಾ ನಾಗರಿಕರಿಗೆ ಅನುಕೂಲವಾಗುವಂತೆ Digital document wallet ನ್ನು ಪ್ರಾರಂಭಿಸಲಾಗಿದೆ. ನಾಗರಿಕರ ಎಲ್ಲಾ ಭೌತಿಕ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಿ (ಅಂಕಪಟ್ಟಿಸೇರಿದಂತೆ) ತಮ್ಮ ದೈನಂದಿನ ಎಲ್ಲಾ ಅಗತ್ಯತೆಗಳಿಗೆ ಬೇಕಾದಾಗ ಉಪಯೋಗಿಸಲು ಅಧಿಕೃತ ದಾಖಲೆಗಳೆಂದು ಪರಿಗಣಿಸಲು ನಿರ್ದೇಶನವನ್ನು Rule 9A of the Information Technology (Preservation and Retention of Information by Intermediaries Providing Digital Locker facilities) Rules, 2016ನ್ನು ದಿನಾಂಕ:08–02–2017ರ GSR 711(E) ರಂತೆ ಪ್ರಕಟಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಪರಿಷತ್ತು ಸದರಿ ಯೋಜನೆಯ ಪ್ರಯೋಜನವನ್ನು ಎಲ್ಲಾ ವಿದ್ಯಾರ್ಥಿಗಳು ಪಡೆಯುವಂತಾಗಲು ಪ್ರಚಾರ ಪಡಿಸಲು ಎಲ್ಲಾ ವಿಶ್ವವಿದ್ಯಾಲಯಗಳಿಗೆ ನಿರ್ದೇಶಿಸಿರುತ್ತಾರೆ. ಕುವೆಂಪು ವಿಶ್ವವಿದ್ಯಾಲಯವು ತನ್ನ ವ್ಯಾಪ್ತಿಯ ಎಲ್ಲಾ ಕಾಲೇಜಿನ ವಿದ್ಯಾರ್ಥಿಗಳಿಗೆ ಈ ಕೆಳಕಂಡ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಎಲ್ಲಾ ಕಾಲೇಜಿನ ಪ್ರಾಂಶುಪಾಲರು **ದಿನಾಂಕ:28–02–2020ರಂದು 'ರಾಷ್ಟ್ರೀಯ ವಿಜ್ಞಾನ ದಿನ' ವನ್ನು "ಡಿಜಿಟಲ್ ಇಂಡಿಯಾದಲ್ಲಿ ವಿದ್ಯಾರ್ಥಿ ಸ್ನೇಹಿ – Digi Locker ವ್ಯವಸ್ಥೆ"** ಎಂಬ ವಿಷಯವಾಗಿ ಪ್ರಬಂಧ ರಚನೆ ಕಾರ್ಯಕ್ರಮವನ್ನು ಆಯೋಜಿಸುವ ಮೂಲಕ ಆಚರಿಸಲು ಸೂಚಿಸಿದೆ.

**ಈ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಕೆಳಕಂಡ ಮಾಹಿತಿಯನ್ನು ನೀಡಲಾಗಿದೆ.**

- ಸೂಚಿತ ದಿನಾಂಕದಂದು ಬೆಳಗ್ಗೆ 11 ಗಂಟೆಯಿಂದ 12 ಗಂಟೆಯವರೆಗೆ ಏಕಕಾಲದಲ್ಲಿ ಆಯಾ ತರಗತಿಯಲ್ಲಿಯೇ ಪ್ರಬಂಧ ಬರೆಯಲು ಏರ್ಪಾಡು ಮಾಡುವುದು.
- ಪ್ರಬಂಧದ ಶೀರ್ಷಿಕೆ ಹಾಗೂ ಪ್ರಥಮ ಮಾಹಿತಿಯನ್ನು ವಿದ್ಯಾರ್ಥಿಗಳ ಗಮನಕ್ಕೆ ಮುಂಚಿತವಾಗಿ ತರುವುದು.
- ಎಲ್ಲಾ ವಿದ್ಯಾರ್ಥಿಗಳೂ ಕಡ್ಡಾಯವಾಗಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದು.
- ಪ್ರಬಂಧವನ್ನು ಕನ್ನಡ ಅಥವಾ ಇಂಗ್ಲೀಷ್ ಭಾಷೆಯಲ್ಲಿ ಒಂದು ಸಾವಿರ ಪದಗಳನ್ನು ಮೀರಬಾರದು.
- ಆಯಾ ತರಗತಿಯಲ್ಲಿಯೇ ಒಂದೊಂದು ಅತ್ಯುತ್ತಮ ಬರಹಗಳನ್ನು ಆಯ್ಕೆ ಮಾಡಿ ಕ್ರೋಢೀಕರಿಸಿ, ನಂತರದಲ್ಲಿ ಕಾಲೇಜು ಮಟ್ಟದಲ್ಲಿ ಒಂದು ಉತ್ತಮ ಪ್ರಬಂಧವನ್ನು ಆಯ್ಕೆ ಮಾಡಿ ವಿಶ್ವವಿದ್ಯಾಲಯಕ್ಕೆ ದಿನಾಂಕ:03–03–2020 ರೊಳಗೆ ಕಳುಹಿಸಿಕೊಡುವುದು.
- ಕಾಲೇಜಿನಲ್ಲಿಯೇ ಅಧ್ಯಾಪಕರ ಸಮಿತಿಯನ್ನು ರಚಿಸಿ ಮೌಲ್ಯಮಾಪನವನ್ನು ನಡೆಸುವುದು.
- ಕಾಲೇಜು ಮಟ್ಟದಲ್ಲಿ ಆಯ್ಕೆಯಾದ ಪ್ರಬಂಧವನ್ನು ಎಲ್ಲಾ ವಿದ್ಯಾರ್ಥಿಗಳು ಓದಲು ಅನುಕೂಲವಾಗುವಂತೆ ನೋಟೀಸ್ ಬೋರ್ಡ್‌ನಲ್ಲಿ ಕಡ್ಡಾಯವಾಗಿ ಪ್ರಕಟಿಸುವುದು.
- ಸದರಿ ಕಾರ್ಯಕ್ರಮಕ್ಕೆ ವಿಶ್ವವಿದ್ಯಾಲಯದಿಂದ ಯಾವುದೇ ರೀತಿಯ ಧನ ಸಹಾಯವನ್ನು ನೀಡುವುದಿಲ್ಲ.
- ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲಾ ಕಾಲೇಜಿನ ಪ್ರಬಂಧಗಳನ್ನು ಪರಿಶೀಲಿಸಿ ಅಂತಿಮವಾಗಿ ಮೂರು ಅತ್ಯುತ್ತಮ ಪ್ರಬಂಧಗಳನ್ನು ಆಯ್ಕೆ ಮಾಡಿ ಪ್ರಮಾಣ ಪತ್ರವನ್ನು ನೀಡಲಾಗುವುದು.

ಕುಲಸಚಿವ(ಪರೀಕ್ಷಾಂಗ/ಮೌಲ್ಯಮಾಪನ)
ಕುವೆಂಪು ವಿಶ್ವವಿದ್ಯಾಲಯ
ಜ್ಞಾನಸಹ್ಯಾದ್ರಿ, ಶಂಕರಘಟ್ಟ–577 451

Digital